

ತೀರಾ ಇತ್ತೀಚಿನವರೆಗೂ ವಿದೇಶ ಪ್ರವಾಸವೆನ್ನುವುದು ಉಳ್ಳವರ ಬಾಬತ್ತಾಗಿತ್ತು. ಆದರೆ, ಈಗ ಅಂಗೈನ ಮೊಬೈಲ್‌ನಲ್ಲಿ ವಿಶ್ವ ಕಾಣಿಸುತ್ತಿರುವ ಸಂದರ್ಭದಲ್ಲಿ ವಿದೇಶ ಪ್ರವಾಸ ಜನಸಾಮಾನ್ಯರಿಗೂ ಎಟುಕುವ ಅನುಭವವಾಗಿದೆ. ಸ್ವಲ್ಪ ಯೋಜಿಸಿದರೆ, ಸುಲಭವಾಗಿ ವಿದೇಶಕ್ಕೆ ಹೋಗಿಬರಬಹುದು. ಪ್ರವಾಸಿ ಸಂಸ್ಥೆಗಳಂತೂ ಹಲವು ರೂಪದ ಆಕರ್ಷಕ ಪ್ಯಾಕೇಜ್‌ಗಳಲ್ಲಿ ರೂಪಿಸಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಯಾರ ಅಂಕೆಯೂ ಬೇಡ, ನಮ್ಮಿಷ್ಟಕ್ಕೆ ನಾವು ಹೋಗಿಬರುತ್ತೇವೆ ಎಂದು ವಿದೇಶಗಳಿಗೆ ಹೋಗಿಬರುವವರ ನೆರವಿಗೆ ಒದಗುವ ಅಂತರ್ಜಾಲ ತಾಣಗಳೂ ಸಾಕಷ್ಟಿವೆ.

ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನಿಂದ ಸುಮಾರು ಎಪ್ಪತ್ತು ರೈತರು ಸಿಂಗಪುರ, ಶ್ರೀಲಂಕಾ ಮತ್ತು ಥಾಯ್ಲೆಂಡ್ ದೇಶಗಳ ಪ್ರವಾಸ ಮಾಡಿ ಬಂದರು. ಮೂರೂ ದೇಶಗಳ ಹತ್ತು ದಿನಗಳ ಪ್ರವಾಸಕ್ಕೆ ಅವರು ಖರ್ಚು ಮಾಡಿದ್ದು ತಲಾ ₹ 65 ಸಾವಿರ. ಹಾಗೆಂದು ಇವರೆಲ್ಲರೂ ದೊಡ್ಡ ಜಮೀನುದಾರರಲ್ಲ. ಇವರಲ್ಲಿ ಕೇವಲ 40 ಗುಂಟೆ ಮತ್ತು 50 ಗುಂಟೆ ಜಮೀನು ಇರುವವರಿದ್ದರು, ಕೇವಲ 2–3 ಎಕರೆ ಜಮೀನು ಇರುವವರೂ ಕೆಲವರಿದ್ದರು. ಇಬ್ಬರಿಗಂತೂ ಜಮೀನೇ ಇಲ್ಲ. ಅವರು ಹಸುಗಳನ್ನು ಸಾಕಿ ಹಾಲು ಮಾರಿ ಜೀವನ ನಡೆಸುವ ಹೈನುಗಾರರು. ಓದು ಬರಹ ಬರದವರೂ ಮೂರ್ನಾಲ್ಕು ಮಂದಿ ಇವರ ಗುಂಪಿನಲ್ಲಿದ್ದರು.

‘ಇದು ಸಾಧ್ಯವಾದದ್ದು ರೈತರ ಒಗ್ಗಟ್ಟಿನಿಂದ. ಬಿ.ಪಿ.ಎಲ್. ಕಾರ್ಡ್ ಇರುವವರು, ಒಂದೆಕರೆ ಜಮೀನು ಇರುವ ರೈತ ಕೂಡ ವಿದೇಶ ಪ್ರವಾಸ ಮಾಡಬೇಕು, ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂಬುದು ನಮ್ಮ ಆಲೋಚನೆಯಾಗಿತ್ತು. ಯಾವುದೂ ಅಸಾಧ್ಯವಲ್ಲ, ಪ್ರಯತ್ನ ಮಾಡಬೇಕಷ್ಟೆ’ ಎಂದು ರೈತಕೂಟಗಳ ಒಕ್ಕೂಟದ ಅಧ್ಯಕ್ಷ ಹಿತ್ತಲಹಳ್ಳಿ ಎಚ್.ಜಿ. ಗೋಪಾಲಗೌಡ ತಮ್ಮ ಪ್ರವಾಸದ ಬಗ್ಗೆ ವಿವರಿಸುತ್ತಾರೆ.

‘ನಾನು ಸರ್ಕಾರ ಏರ್ಪಡಿಸಿದ್ದ ಪ್ರವಾಸದಲ್ಲಿ ಚೀನಾ ದೇಶಕ್ಕೆ ಹೋಗಿ ಬಂದಿದ್ದೆ. ನಮ್ಮ ರೈತ ಕೂಟದ ಕೆಲವು ಸದಸ್ಯರು ತಾವೂ ವಿದೇಶ ನೋಡಬೇಕೆಂದು ಆಸೆ ವ್ಯಕ್ತಪಡಿಸುತ್ತಿದ್ದರು. ಒಂದೇ ಬಾರಿ ಅಷ್ಟು ಹಣವನ್ನು ಹೊಂದಿಸಲು ಎಲ್ಲರಿಗೂ ಆಗುವುದಿಲ್ಲ. ಹಾಗಾಗಿ ನಾವು ತಿಂಗಳಿಗೊಮ್ಮೆ ಸೇರಿ ತಲಾ 5 ಸಾವಿರ ರೂಪಾಯಿ ಸಂಗ್ರಹಿಸೋಣ. ಒಂದು ವರ್ಷದ ನಂತರ ಯಾವ ದೇಶಕ್ಕೆ ಹೋಗೋಣ ಎಂದು ತೀರ್ಮಾನಿಸೋಣ ಎಂದು ನಾನು ನಮ್ಮ ಸದಸ್ಯರಿಗೆ ಹೇಳಿದೆ. ಎಲ್ಲರೂ ಒಪ್ಪಿದರು. ಮೊದಲ ತಿಂಗಳು 20 ಮಂದಿ ಸೇರಿದೆವು. ಎಲ್ಲರೂ ಹಣ ಕೊಟ್ಟರು. ಈ ವಿಷಯ ವಿವಿಧ ರೈತಕೂಟಗಳ